ಮುಂದೆ ಹೋದರೂ ಅವು ಅವಳ ಬೆನ್ನನೇರಿದ್ದವು.

ಹೊರಗೆ ಅಂಗಳದಲ್ಲಿ ಮೂರುನಾಲ್ಕು ಗುಂಪುಗಳು. ಹೆಂಗಸರದ್ದು ಒಂದು ಕಡೆ, ಗಂಡಸರದ್ದು ಬೇರೆ ಕಡೆ. ಒಂದೊಂದರಲ್ಲೂ ನಾಲ್ಕೈದು ಜನ. ಉರಿಹೊತ್ತಿ ಕುದಿಯುತ್ತಿರುವಂತೆ ಕೆಲವಿದ್ದರೆ, ಸೋತುಸುಣ್ಣವಾಗಿ ನಿರ್ಜೀವವಾಗಿ ಕಂಡ ಕೆಲವು. ಕಂಡ ತಮ್ಮ ಕಡೆ ಅರೆಕ್ಷಣಕ್ಕಿಂತ ಕಡಿಮೆ ಸಮಯ ದೃಷ್ಟಿ ಹಾಯಿಸಿ, ಮತ್ತೆ ತಿರುಗಿ, ತಮ್ಮದೇ ಪಿಸು ಮಾತಿನಲ್ಲಿ ಐಕ್ಯವಾದವು.

ಅಲ್ಲೊಬ್ಬ ಬಂದೂಕು ಹಿಡಿದು ನಿಂತಿದ್ದ ಪೊಲೀಸಿನವನು. ಸ್ವಲ್ಪ ದೂರದಲ್ಲಿ ರಿಜಿಸ್ಟರ್‌ನೊಂದಿಗೆ ಟೇಬಲ್ ಹಿಂದೆ ಕುಳಿತಿದ್ದ ಇನ್ನೊಬ್ಬ. ಸರಸೂ ಬಂದೂಕು ಹಿಡಿದವನನ್ನು 'ಇನ್‌ಸ್ಪೆಕ್ಟರ್‌ನ ನೋಡ್ಬೇಕಿತ್ತು' ಎಂದು ವಿಚಾರಿಸಿದಳು. ಅವನು ಮಾತಿಲ್ಲದೆ ಟೇಬಲ್ ಕಡೆ ಬೆರಳು ತೋರಿಸಿದ. ಸರಸೂ ಅವನ ಬಳಿ ಹೋದಳು.

'ಮೊನ್ನೆ ರಾತ್ರಿ ಒಬ್ಬನ್ನ ಅರೆಸ್ಟ್ ಮಾಡಿದಾರೆ... ಇನ್‌ಸ್ಪೆಕ್ಟರ್‌ನ ನೋಡ್ಬೇಕಾಗಿತ್ತು' ಎಂದಳು.

ಅವನು ಕತ್ತೆತ್ತಿ 'ಯಾರು?' ಎಂದ.

'ಬಾಲಾಜಿ ಅಂತ' ಅವನ ದೃಷ್ಟಿ ತೀಕ್ಷ್ಣವಾಯಿತು.

'ನೀವು?'

'ಸರಸೂ.'

ಹೆಸರು ಕೇಳಿ ಕಣ್ಣರಳಿಸಿದ... ಅಲ್ಲಿಂದಲೇ ಒಳಗೆ ನೋಡಿದ. ಅವರೂ ಆ ಕಡೆ ನೋಡಿದಾಗ ಕಂಡದ್ದು ಇನ್‌ಸ್ಪೆಕ್ಟರ್ ಕುಳಿತುಕೊಳ್ಳುವ ಕೋಣೆ. ಏನೋ ಮಾತುಗಳು ಕೇಳುತ್ತಿತ್ತು.

'ಒಂದು ನಿಮಿಷ ಕೂತ್ಕೊಳ್ಳಿ ಮೇಡಂ... ಸಾಹೇಬ್ರು ಫ್ರೀ ಆದ್ಮೇಲೆ ಹೋಗಿವಿರಂತೆ.'

ಒಳಗಿನ ಇನ್ನೊಂದು ಭಾಗದಿಂದ ಅರಚಾಡುತ್ತಿದ್ದ, ಗೋಳಾಡುತ್ತಿದ್ದ ಎತ್ತರದ ದನಿಗಳು, ಅವು ಎರಡು ಸೆಕೆಂಡು ಸಣ್ಣಗಾದರೆ ಮತ್ತದೇ ಆರ್ಭಟ.

ಅವಳು ಒಳಗೆ ಇಣುಕಿದಳು. ಈಗ ಅವಳಿಗೆ ಕಬ್ಬಿಣದ ಸರಳುಗಳ ಬಾಗಿಲುಗಳಿದ್ದ ಕೋಣೆಗಳು ಕಂಡವು. ಅಲ್ಲಲ್ಲಿ ಹೆಂಗಸರುಗಂಡಸರು. ನಡುವೆ ರಿಜಿಸ್ಟರುಗಳ ನಡುವೆ ಕುಳಿತ ಇನ್ನೊಬ್ಬ. ಅತ್ತ ಕಡೆ ಗೋಡೆಯೊಂದರ ಮೇಲೆ ಕುಖ್ಯಾತ ಅಪರಾಧಿಗಳ ಕಟ್ಟು ಹಾಕಿದ ಫೋಟೊಗಳು.

'ಈಗ ಹೋಗಿ' ಎಂದದ್ದಕ್ಕೆ ನಾಗೇಂದ್ರನ ಜೊತೆ ಹೆಜ್ಜೆ ಇಟ್ಟು
ಇನ್‌ಸ್ಪೆಕ್ಟರ್ ರೂಮಿಗೆ ಹೋದಳು.

ಅವನು ತಲೆ ಎತ್ತಿದ.

'ನಾನು ಸರಸೂ... ಮೊನ್ನೆ ರಾತ್ರಿ.'

ಅವಳ ಮಾತು ತಡೆದು, 'ಗೊತ್ತಾಯ್ತು. ಕೂತ್ಕೊಳಿ... ಹೇಗಿದೀರಿ?'

ಅವಳು ಕುಳಿತುಕೊಂಡು ನಾಗೇಂದ್ರನ ಕಡೆ ನೋಡಿದಳು. ಪಕ್ಕದ ಕುರ್ಚಿಯಲ್ಲಿ ಅವನು ಕುಳಿತ.

'ಬಾಸ್ಟರ್ಡ್... ಹಳೆ ಗಿರಾಕಿ... ತುಂಬ ಹುಡುಕುತ್ತಿದ್ವಿ... ಒಳ್ಳೇ ಕೆಲ್ಸ ಆಯ್ತು ನಿಮ್ಮಿಂದ.'

ಅವಳು ತಲೆ ಕೆಳಗೆ ಮಾಡಿದಳು.

'ಇನ್ನು ಅವನ ಕಥೆ ಮುಗೀತು ಬಿಡಿ... ಏನು ವಿಷಯ?'

'ಅವನನ್ನು ನೋಡ್ಬೇಕಿತ್ತು.' ತಡೆದು ಹೇಳಿದಳು.